ಸಜ್ಜುಗೊಳಿಸಲು ಬಂದಿದ್ದಾನೆಂದೇ ಸಹಪಾಠಿಗಳು ತಿಳಿಯುತ್ತಿದ್ದರು. ನಟನಿದ್ದ ಹಾಸ್ಟೆಲ್‌ಗೆ ರಾತ್ರಿ ಊಟವಾದ ನಂತರ ಬರುತ್ತಿದ್ದ 'ಸಮಪಾಲು' ಹೋರಾಟದವರು ಕರಡಿ–ನರಿ ಕಥೆ ಹೇಳುತ್ತಿದ್ದರು. ತನ್ನೂರು, ಅಪ್ಪ–ಅಮ್ಮ, ಬಂಧು–ಬಳಗ ಇರುವ ಸ್ಥಿತಿಗೂ ಸಮಪಾಲು ಹೋರಾಟದವರು ಹೇಳುತ್ತಿರುವ ನ್ಯಾಯದ ಕಥೆಗೂ ಸಿಂಕ್ ಆಗಿ, ನಟ ಅವರ ಸಭೆಗಳಲ್ಲೆಲ್ಲ ಮುತುವರ್ಜಿಯಿಂದ ಭಾಗವಹಿಸುತ್ತಿದ್ದ. ಫಲಿತವಾಗಿ ನಟನ ಸೂಟ್‌ಕೇಸಿನಲ್ಲಿದ್ದ ಆಲ್ಬಮ್ ಅವನು ಅರೆಬೆತ್ತಲಾಗಿರುವ, ಕಪ್ಪು ಪಟ್ಟಿ ಹಿಡಿದಿರುವ, ಕಾಲ್ನಡಿಗೆ, ಸೈಕಲ್ ಜಾತಾಗಳಲ್ಲಿ ಪಾಲ್ಗೊಂಡಿರುವ ಫೋಟೊಗಳಿಂದ ಕಿಕ್ಕಿರಿದಿತ್ತು. ಇದಿಷ್ಟನ್ನು ಬಿಟ್ಟರೆ ಇನ್ನೇನೂ ಆಗುವಂಥದ್ದು ಆಗಿರಲಿಲ್ಲ.

ನಟ ತಾನು ಊರಿನ ಶಾಲೆಯಲ್ಲಿ ಎರಡನೇ ಕ್ಲಾಸ್ ಓದುವಾಗಲೇ ಇಪ್ಪತ್ತರ ತನಕ ಮಗ್ಗಿ ಗಟ್ಟಿ ಮಾಡಿ ನಾಲ್ಕನೇ ಕ್ಲಾಸ್ ಹುಡುಗ ಹುಡುಗಿಯರಿಗೆ ಮೂಗಿಡಿದುಕೊಂಡು ಕೆನ್ನೆಗೆ ಬಾರಿಸುವ ಅಸ್ತ್ರವನ್ನು ಸೋಮಜ್ಜ ಮೇಷ್ಟ್ರಿಂದ ಪಡೆದುಕೊಂಡಿದ್ದ. ಇಂಥ ಬ್ರಿಲಿಯಂಟ್ ನಟ ಡಿಗ್ರಿ ಓದಲು ದೂರದ ತುಮಕೂರಿಗೆ ಬಂದವನು ಸಮಪಾಲು ಹೋರಾಟದ ಭಾಗವೇ ಆಗಿ ಪದವಿ ಮುಗಿಯುವಷ್ಟರಲ್ಲಿ ಮೂರು ಉಲ್ಡಾಕಿಕೊಂಡು ಅವಮಾನಕ್ಕೆ ತುತ್ತಾಗಿದ್ದ. ಅಂತಿಮವಾಗಿ ಓದನ್ನು ಚಾಲೆಂಜ್ ಆಗಿ ತೆಗೆದುಕೊಂಡು, ಒಂದೇ ವರ್ಷದಲ್ಲಿ ಉಳಿಕೆ ಎಲ್ಲ ಸಬ್ಜೆಕ್ಟ್‌ಗಳನ್ನು ಓದಿ ಹೆಚ್ಚಿನ ಅಂಕಗಳೊಂದಿಗೆ ಪಾಸು ಮಾಡಿದ್ದ. ಹಗಲು ರಾತ್ರಿ ಓದುತ್ತಿದ್ದ ಈತನ ಓರಿಗೆಯವರಿಗಿಂತ ತುಸು ಹೆಚ್ಚೆ ಅಂಕ ತೆಗೆದು ಜ್ಞಾನಭಾರತಿಯಲ್ಲಿ ಇಂಗ್ಲಿಷ್ ಎಂ.ಎ.ನಲ್ಲಿ ಸೀಟು ಗಿಟ್ಟಿಸಿಕೊಂಡಿದ್ದ. ನಪಾಸಾಗಿ ಅಲೆಯುವಾಗ ಊಟಬಟ್ಟೆಗೆ ಪರದಾಡಿದ್ದು, 'ಏನಾಯ್ತು ಡಿಗ್ರಿ' ಎಂದು ಕೇಳಿದವರಿಗೆ ಹೇಳಲು ತೊಡರಿಸಿದ್ದು, ಇವೆಲ್ಲ ನಟನನ್ನು ಮತ್ತೆ ಹಿಂದಿನ ಶಿಸ್ತಿನ ವಿದ್ಯಾರ್ಥಿಯಾಗಿ ರೂಪಗೊಳ್ಳುವಂತೆ ಮಾಡಿತ್ತು. ನಾಲ್ಕುಜೊತೆ ಹೊಸಬಟ್ಟೆಯೊಂದಿಗೆ ಫೈಲ್‌ನ ಲೀಫ್‌ಗಳಲ್ಲಿ ಈವರೆಗೆ ಓದಿದ್ದರ ಸರ್ಟಿಫಿಕೇಟ್‌ಗಳನ್ನು ತುಂಬಿಕೊಂಡು ಜ್ಞಾನಭಾರತಿಯ ಅದೇ 32ನೇ ರೂಮಿಗೆ ಹೊಸದಾಗಿ ತಲುಪಿದ್ದ. ಬಟ್ಟೆ ಬ್ಯಾಗು ಎಲ್ಲವೂ ಹೊಸದೇ ಆದರೂ ತನ್ನ ಚಳವಳಿ ಕೋಡ್ ಆಗಿದ್ದ ಗಡ್ಡವನ್ನ ಕೊಂಚ ಟ್ರಿಮ್ ಮಾಡಿಕೊಂಡು ಯೂನಿವರ್ಸಿಟಿಗೆ ಪದಾರ್ಪಣೆ ಮಾಡಿದ್ದ.



ದೂರದ ನಾನಾ ಜಿಲ್ಲೆಗಳಿಂದ ಇಂಗ್ಲಿಷ್ ಎಂ.ಎ. ಓದಲು ಬಂದಿದ್ದ ವಿದ್ಯಾರ್ಥಿಗಳಲ್ಲಿ ಹಲವರು ತಮ್ಮ ಬಣ್ಣ ಬಟ್ಟೆಯಲ್ಲಿ ತಮ್ಮೂರನ್ನ ಹೊತ್ತೇ ಬಂದಿದ್ದರಾದರೂ ಅದನ್ನು ಮರೆಮಾಚಲೆಂಬಂತೆ ಇವತ್ತಿನ ಬಟ್ಟೆ ಬರೆಗಳನ್ನು ತೊಡಲು ಪ್ರಯತ್ನಿಸಿದ್ದರು. ಮೂಲ ಗುಣ ಅದೆಲ್ಲಿ ಬಿಟ್ಟೀತು! ನಗರದ ಐಶಾರಾಮಿ ಮನೆತನದ ಕೆಲವರು ಬೈಕು, ಸ್ಕೂಟಿ, ಕಾರುಗಳಲ್ಲೂ ಬರುತ್ತಿದ್ದರು. ಕೂಲಿಂಗ್ ಗ್ಲಾಸ್ ಧರಿಸಿ, ಜೀನ್ಸ್ ತೊಟ್ಟು, ಸ್ಕೂಟಿ ಮೇಲೆ ಹೈಸ್ಪೀಡ್‌ನಲ್ಲಿ ಬರುವ ಮಾಡೆಸ್ಟ್ ಹುಡುಗಿಯರೂ ಇದ್ದರು. ತನ್ನ ಎಂದಿನ ಆಯ್ಕೆಯಂತೆಯೇ ಲಾಸ್ಟ್ ಬೆಂಚ್‌ನಲ್ಲಿ ಸೀಟು ಮಾಡಿಕೊಂಡಿದ್ದ ಟ್ರಿಮ್ ಗಡ್ಡಧಾರಿ ನಟ ತನ್ನ ಸ್ವಭಾವಕ್ಕೆ ತಕ್ಕುನಾದ ಗೆಳೆಯರಿಗಾಗಿ ಹುಡುಕಾಟ ನಡೆಸಿದ್ದ. ಆದರೆ, ನಟನನ್ನು ಒಂದೇ ನೋಟಕ್ಕೆ ಸೆಳೆದವಳು ಹಳದಿ ಚೂಡಿದಾರ್‌ನಲ್ಲಿದ್ದ ಎತ್ತರ ನಿಲುವಿನ ಲಲಿತಾ. ಪರಂಗಿ ಹಣ್ಣಿನ ಬಣ್ಣದ, ದುಂಡು ಮುಖದ ಲಲಿತಾ ಕಣ್ಣುಬ್ಬು ತುಟಿ ಕೆಂಪಿನಲ್ಲಿ ಕಡೆದಿಟ್ಟ ಶಿಲ್ಪವಾಗಿದ್ದಳು.

ಮಾರನೆ ದಿನ ದಪ್ಪ ಕೂಲಿಂಗ್ ಗ್ಲಾಸ್ ಹಾಕಿ, ಜೀನ್ಸ್ ಮತ್ತು ಟಾಪ್‌ನಲ್ಲಿ ಕೂದಲನ್ನು ಗಾಳಿಯಲ್ಲಿ ಹಾರಲು ಬಿಟ್ಟು, ಸ್ಕೂಟಿಯಲ್ಲಿ ಜುಂಯ್‌ನೆ ಬಂದವಳು ನಿನ್ನೆ ಕಾಣಿಸಿಕೊಂಡ ಅದೇ ಲಲಿತಾ ಎಂಬುದು ದೃಢವಾಗಲು ನಟನಿಗೆ ಸ್ವಲ್ಪ ಹೊತ್ತೇ ಹಿಡಿಯಿತು. ಲಲಿತಾ ಒಂದೇ ನೋಟಕ್ಕೆ ಮತ್ತೆ ಮತ್ತೆ